**ಪ್ರ ದ ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 1398/2023**

ಸಾಕ್ಷಿಯ ಹೆಸರು: ಲೋಕೇಶ ಬಿ ಎಸ್

ತಂದೆ / ಗಂಡನ ಹೆಸರು : ಲೇಟ್ ಬಾಲಪ್ಪ ಕೆ

ವಯಸ್ಸು : 49

ಉದ್ಯೋಗ : ಅಬಾಕರಿ ನಿರೀಕ್ಷಕರು

ವಾಸ ಸ್ಥಳ : ಮೈಸೂರು

ಚಾಸಾ 6ಃ

ಪ್ರಾಸಾ ಃ 6

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 09.06.2026**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನಾನು 2022 ಫೆಬ್ರವರಿ ರಿಂದ ನವೆಂಬರ 2023 ರವರೆಗೆ ಹೆಚ್ಚುವರಿ ಅಬಕಾರಿ ನೀರಿಕ್ಷಕರಾಗಿ ಕೆ ಎಸ್ ಬಿ ಸಿ ಎಲ್ ಡಿಪ್ರೋ ಕುಶಾಲನಗರದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 06.09.2023 ರಂದು ಚಾಸಾ 18 ರವರು ಸದರಿ ಪ್ರಕರಣದಲ್ಲಿ ವಶಪಡಿಸಿಕೊಂಡ ಟೆಟ್ರಾ ಪ್ಯಾಕೇಟುಗಳು ಕೆ ಎಸ್ ಬಿ ಸಿ ಎಲ್ ಡಿಪ್ರೋದಿಂದ ಯಾವ ಸನ್ನದಿಗೆ ವಿತಿರಸಲಾಗಿರುತ್ತದೆ ಎಂದು ವರದಿ ನೀಡಲು ಕೋರಿದ್ದು ಅದರಂತೆ ದಿಃ 11.09.2023 ರಂದು ಪರಿಶೀಲಿಸಿ ಸದರಿ ಮದ್ಯದ ಟೆಟ್ರಾ ಪ್ಯಾಕೇಟುಗಳು ಯಾವ ಸನ್ನದಿಗೆ ಸರಬರಾಜು ಆದ ಬಗ್ಗೆ ವರದಿಯನ್ನು ನೀಡಿರುತ್ತೇನೆ

ಸಾಕ್ಷಿಗೆ ಮನವಿ ಪತ್ರ ಮತ್ತು ವರದಿಯನ್ನು ತೋರಿಸಲಾಗಿ ಸಾಕ್ಷಿಯು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮನವಿ ಪತ್ರ ಮತ್ತು

ವರದಿಯನ್ನು ನಿಪಿ 6 ಮತ್ತು 7 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 6ಎ ಮತ್ತು 7 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಸಿ ಎಸ್ ವಕೀಲರಿಂದ**

ನಾನು ಸದರಿ ಪ್ರಕರಣದಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ಯಾವುದೆ ಇನವಾಯ್ಸನ್ನು ವಿತರಿಸುತ್ತೀರಾ ಎಂದರೆ ಸಾಕ್ಷಿಯು ಪೋಲಿಸರು ಯಾವುದೆ ಕೋರಿಕೆಯನ್ನು ನೀಡಿರುವುದಿಲ್ಲ ಎಂದು ನುಡಿದರು. ಪೋಲಿಸರು ನೀಡಿರುವ ಕೋರಿಕೆ ಪತ್ರವನ್ನು ನಾನು ಓದಿರುತ್ತೇನೆ. ಪೋಲಿಸರು ನಿಪಿ 6ರಂತೆ ಇನವಾಯ್ಸನ್ನು ಪರಿಶೀಲಿಸಿ ದೃಡೀಕರಿಸಿ ನೀಡಲು ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಕೋರಿಕೆ ಪತ್ರವನ್ನು ಸರಿಯಾಗಿ ಪರಿಶೀಲನೆ ಮಾಡದೆ ನಿಪಿ 7 ನ್ನು ವಿತರಿಸುರುತ್ತೇನೆ ಎಂರದೆ ಸರಿಯಲ್ಲ. ಪೋಲಿಸರು ಸೃಷ್ಟಿ ಮಾಡಿಕೊಂಡು ಸುಳ್ಳು ಪ್ರಕರಣಕ್ಕೆ ನಿಪಿ 7 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ.